ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ –೧೬೧ Volume - 161	ಬೆಂಗಳೂರು, ಶನಿವಾರ, ೦೬, ಜೂನ್, ೨೦೨೬ (ಜ್ಯೇಷ್ಠ, ೧೬, ಶಕವರ್ಷ, ೧೯೪೮) BENGALURU, SATURDAY, 06, JUNE, 2026 (JYAISTHA , 16, SHAKAVARSHA, 1948)	ಸಂಚಿಕೆ ೧೦೮ Issue 108

ಭಾಗ ೫

ಸರ್ಕಾರದ ಮತ್ತು ಖಾಸಗಿ ಜಾಹೀರಾತುಗಳು, ಲೋಕಸೇವಾ ಆಯೋಗದ ಜಾಹೀರಾತುಗಳು, ನೇಮಕಾತಿ ಸಮಿತಿಗಳ ಜಾಹೀರಾತುಗಳು

FORM–IV.
(See Rule12)

This form should be Typed in English only in Block Letters.

NOTICE

It is here by Notified that the under signed has changed his / her name from **NIRANJANA BABU REDDY H.S.** to **NIRANJANA BABU H.S.**

Date-28-10-2025

(Write the date in figures just like date 1-5-1960)

Signature in the old name…… **NIRANJANA BABU REDDY H.S.**

(Write down the name of the person in the Above space who has signed above).

Left hand thumb impression of…… **NIRANJANA BABU REDDY H.S.**

PD C/N-24

ಕರ್ನಾಟಕ ಲೋಕಸೇವಾ ಆಯೋಗದ ನಡವಳಿಗಳು

ವಿಷಯ: ಶ್ರೀ ಕರೆಪ್ಪ ಹಣಮಂತ ತುಬಚಿ ನೋಂದಣಿ ಸಂಖ್ಯೆ:240604503ರ ಅಭ್ಯರ್ಥಿಯು 2024ನೇ ಸಾಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಳಿಕೆ ಮೂಲ ವೃಂದದ ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ಹಾಜರಾಗಿರುವ ಪ್ರಕರಣ ಕುರಿತು.

******

ಓದಲಾಗಿದೆ:

1. ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿಇ(2)3069/2019-20, ದಿನಾಂಕ:31-01-2020 (ಉಳಿಕೆ ಮೂಲ ವೃಂದ). ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ ಇ(2)3070/2019-20, ದಿನಾಂಕ:31-01-2020 (ಹೈ.ಕ.ವೃಂದ). ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ ಇ(2)3071/2019-20, ದಿನಾಂಕ:31-01-2020 (03-ಉಳಿಕೆ ಮೂಲ ವೃಂದ ಮತ್ತು 01-ಹೈ.ಕ ವೃಂದ) ರ ಅಧಿಸೂಚನೆಗಳಲ್ಲಿ ಅಧಿಸೂಚಿಸಲಾಗಿದ್ದ ಸಹಾಯಕರು ಹಾಗೂ ರಾಜ್ಯ ವಿವಿಧ ಇಲಾಖೆಯಲ್ಲಿನ ಸಹಾಯಕರು/ ಪ್ರಥಮ ದರ್ಜೆ ಸಹಾಯಕರ ಹುದ್ದೆಗಳು.
2. ಕರ್ನಾಟಕ ಲೋಕಸೇವಾ ಆಯೋಗದ ಪತ್ರ ಸಂಖ್ಯೆ:ಇ(2)3981/2020-21/ಪಿಎಸ್‌ಸಿ, ದಿನಾಂಕ:04-02-2021.
3. ಸಹಾಯಕ ಪೊಲೀಸ್ ಆಯುಕ್ತರು, ಎ.ಟಿ.ಸಿ, ಸಿ.ಸಿ.ಬಿ, ಸಿ.ಓ.ಪಿ ಕಛೇರಿ, ಬೆಂಗಳೂರು ಇವರ ಪತ್ರ ಸಂಖ್ಯೆ: 10/ಸಿಸಿ/ಎಟಿಸಿ/2020-21, ದಿನಾಂಕ:05-02-2021.
4. ಜ್ಞಾನಭಾರತಿ ಪೊಲೀಸ್ ಠಾಣೆ ಮೊ.ಸಂ:23/2021 ಕಲಂ 120(ಬಿ), 114, 471, 474, 485, 488, 420, 379, ಸಹಿತ 34 ಐಪಿಸಿ ಮತ್ತು 66 (ಸಿ)(ಡಿ) ಮಾಹಿತಿ ತಂತ್ರಜ್ಞಾನ ಕಾಯ್ದೆ-2000.
5. ದಿನಾಂಕ:18-02-2021ರಂದು ನಡೆದ ಆಯೋಗದ 27ನೇ ಸಭೆಯ ನಡವಳಿಗಳು.
6. ದಿನಾಂಕ:08-12-2021ರಂದು ನಡೆದ ಆಯೋಗದ 19ನೇ ಸಭೆಯ ನಡವಳಿಗಳು.
7. ಆಯೋಗದ ಅಧಿಸೂಚನೆ ಸಂಖ್ಯೆ:ಇ(2)597/2023-24/ಪಿಎಸ್‌ಸಿ, ದಿನಾಂಕ:15-03-2024 ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಉಳಿಕೆ ಮೂಲ ವೃಂದ) ಹುದ್ದೆಗಳು.
8. ಶ್ರೀ ಕರೆಪ್ಪ ಹಣಮಂತ ತುಬಚಿ ಇವರಿಗೆ ಜಾರಿ ಮಾಡಲಾದ ಕಾರಣ ಕೇಳುವ ನೋಟಿಸ್ ದಿನಾಂಕ:30-09-2025.
9. ಶ್ರೀ ಕರೆಪ್ಪ ಹಣಮಂತ ತುಬಚಿ ಇವರಿಗೆ ಜಾರಿ ಮಾಡಲಾದ 2ನೇ ಕಾರಣ ಕೇಳುವ ನೋಟಿಸ್ ದಿನಾಂಕ:15-11-2025.
10. ಶ್ರೀ ಕರೆಪ್ಪ ಹಣಮಂತ ತುಬಚಿ ಇವರ ಲಿಖಿತ ಸಮಜಾಯಿಷಿ ಪತ್ರಗಳು ದಿನಾಂಕ:13-10-2025 ಮತ್ತು 28-11-2025.
11. ಆಯೋಗದ ಆದೇಶ ಸಂಖ್ಯೆ:10-12-2025.
12. ಶ್ರೀ ಕರೆಪ್ಪ ಹಣಮಂತ ತುಬಚಿ ಇವರಿಗೆ ಜಾರಿ ಮಾಡಲಾದ ಕಾರಣ ಕೇಳುವ ನೋಟೀಸ್ ದಿನಾಂಕ:23-12-2025.
13. ಶ್ರೀ ಕರೆಪ್ಪ ಹಣಮಂತ ತುಬಚಿ ಇವರ ಲಿಖಿತ ಸಮಜಾಯಿಷಿ ಪತ್ರ ದಿನಾಂಕ:05-01-2026.
14. ವಿಚಾರಣಾಧಿಕಾರಿ ವರದಿ ದಿನಾಂಕ:09-02-2026.
15. ಆಯೋಗದ ನಡವಳಿ ದಿನಾಂಕ:11-03-2026.

****

ಪ್ರಸ್ತಾವನೆ:

ಉಲ್ಲೇಖ-(1)ರಲ್ಲಿ ಓದಲಾದ ಆಯೋಗದ ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ ಇ(2)3069/2019-20, ದಿನಾಂಕ:31-01-2020 (ಉಳಿಕೆ ಮೂಲ ವೃಂದ), ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ ಇ(2)3070/2019-20, ದಿನಾಂಕ:31-01-2020 (ಹೈ.ಕ. ವೃಂದ), ಅಧಿಸೂಚನೆ ಸಂಖ್ಯೆ:ಪಿಎಸ್‌ಸಿ ಇ(2)3071/2019-20, ದಿನಾಂಕ:31-01-2020 (03-ಉಳಿಕೆ ಮೂಲ ವೃಂದ ಮತ್ತು 01-ಹೈ.ಕ ವೃಂದ)ರಡಿ ಅಧಿಸೂಚಿಸಲಾಗಿದ್ದ ರಾಜ್ಯದ ವಿವಿಧ ಇಲಾಖೆಗಳಲ್ಲಿನ ಮತ್ತು ಕರ್ನಾಟಕ ಭವನ, ನವ ದೆಹಲಿಯಲ್ಲಿನ ಸಹಾಯಕರು/ಪ್ರಥಮ ದರ್ಜೆ ಸಹಾಯಕರ ಹುದ್ದೆಗಳ ಉಳಿಕೆ ಮೂಲ ವೃಂದ ಮತ್ತು ಹೈ.ಕ ವೃಂದದ ಹುದ್ದೆಗಳ ನೇಮಕಾತಿಗೆ ಸಂಬಂಧಿಸಿದಂತೆ ದಿನಾಂಕ:23-01-2021ರಂದು ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ ಮತ್ತು ದಿನಾಂಕ:24-01-2021ರಂದು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ನಡೆಸಲು ನಿಗದಿಪಡಿಸಲಾಗಿತ್ತು.

ಸದರಿ ಹುದ್ದೆಗಳ ನೇಮಕಾತಿಗಾಗಿ ದಿನಾಂಕ:24-01-2021ರಂದು ನಡೆಸಬೇಕಾಗಿದ್ದ ಸ್ಪರ್ಧಾತ್ಮಕ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಾಗಿದ್ದರ ಹಿನ್ನೆಲೆಯಲ್ಲಿ ಉಲ್ಲೇಖ-(4)ರಂತೆ ಜ್ಞಾನಭಾರತಿ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ:23/2021 ಕಲಂ 120 (ಬಿ), 114, 471, 474, 485, 488, 420, 379, 201, 212 ಸಹಿತ 34 ಐಪಿಸಿ ಮತ್ತು 66 (ಸಿ)(ಡಿ) ಮಾಹಿತಿ ತಂತ್ರಜ್ಞಾನ ಕಾಯ್ದೆ-2000ರಡಿ ಪ್ರಕರಣ ದಾಖಲಾಗಿದ್ದು ಸದರಿ ಪ್ರಕರಣದ ತನಿಖಾಕಾಲದಲ್ಲಿ ಪ್ರಥಮ ಹಂತವಾಗಿ ಶ್ರೀ ಕರೆಪ್ಪ ಹಣಮಂತ ತುಬಚಿ ಇವರನ್ನೊಳಗೊಂಡಂತೆ ಒಟ್ಟು 20 ಅಭ್ಯರ್ಥಿಗಳನ್ನು ದಸ್ತಗಿರಿ ಮಾಡಲಾಗಿರುತ್ತದೆ ಎಂದು ಪೊಲೀಸ್ ಇಲಾಖೆಯಿಂದ ಮಾಹಿತಿ ನೀಡಲಾಗಿತ್ತು.

ನಂತರ ಈ ಪ್ರಕರಣದಲ್ಲಿ ಭಾಗಿಯಾಗಿದ್ದ 20 ಅಭ್ಯರ್ಥಿಗಳ ವಿರುದ್ಧ ಕ್ರಮ ವಹಿಸುವ ಮುನ್ನ ಆಯೋಗದ ಕಾನೂನು ಕೋಶದ ಮುಖ್ಯಸ್ಥರ ಅಭಿಪ್ರಾಯ ಪಡೆಯಲಾಗಿ, ಕಾನೂನು ಕೋಶದ ಮುಖ್ಯಸ್ಥರು , ಸದರಿ 20 ಅಭ್ಯರ್ಥಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿರುವ ಹಿನ್ನೆಲೆಯಲ್ಲಿ ದಿನಾಂಕ:31-01-2020 ರ ಅಧಿಸೂಚನೆಯ ಕಂಡಿಕೆ-12ರಲ್ಲಿ ದುರ್ನಡತೆ ಬಗ್ಗೆ ವಿವರಿಸಿದಂತೆ ಈ ಅಭ್ಯರ್ಥಿಗಳ ಅಭ್ಯರ್ಥಿತ್ವವನ್ನು ರದ್ದುಪಡಿಸಬಹುದೆಂದು ಅಭಿಪ್ರಾಯ ನೀಡಿದ್ದರು.

ತದನಂತರ ಆಯೋಗದ ದಿನಾಂಕ:18-02-2021ರಂದು ನಡೆದ 27ನೇ ಸಭೆಯ ನಡವಳಿಗಳ ಅನ್ವಯ ಹಾಗೂ ಸಹಾಯಕ ಪೊಲೀಸ್ ಆಯುಕ್ತರು, ಭಯೋತ್ಪಾದನಾ ನಿಗ್ರಹ ದಳ., ಎ.ಟಿ.ಸಿ. ಸಿ.ಓ.ಪಿ ಕಛೇರಿ ದಿನಾಂಕ:09-11-2021ರಂದು ಸಲ್ಲಿಸಲಾದ ಪತ್ರದಲ್ಲಿ ಆಯೋಗಕ್ಕೆ ದೋಷಾರೋಪಣ ಪತ್ರವನ್ನು ನೀಡಿದ್ದ ಹಿನ್ನಲೆಯಲ್ಲಿ ಮತ್ತೊಮ್ಮೆ ದೋಷಾರೋಪಣ ಪಟ್ಟಿಯ ಬಗ್ಗೆ ಕಾನೂನು ಕೋಶದ ಮುಖ್ಯಸ್ಥರ ಸಲಹೆಯನ್ನು ಪಡೆದು ಆಯೋಗದ ದಿನಾಂಕ:08-12-2021ರಂದು ನಡೆದ 19ನೇ ಸಭೆಯ ನಡವಳಿಗಳಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿತ್ತು;

> **"ಸದರಿ ಅಭ್ಯರ್ಥಿಗಳ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ಪ್ರಕರಣಗಳು ಬಾಕಿ ಇರುವುದರಿಂದ ನವೆಂಬರ್ ಹಾಗೂ ಮುಂಬರುವ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈ ಅಭ್ಯರ್ಥಿಗಳು ಹಾಜರಾಗದಂತೆ ತಡೆಹಿಡಿಯಲು ಆಯೋಗವು ನಿರ್ಣಯಿಸಿತು ಹಾಗೂ ಸದರಿಯವರ ವಿರುದ್ಧ ಕರ್ನಾಟಕ ನಾಗರೀಕ ಸೇವೆ ನಿಯಮಗಳು (ಸಾಮಾನ್ಯ ನೇಮಕಾತಿ)-1977ರಡಿ ವಿಚಾರಣೆ ನಡೆಸುವಂತೆ ನಿರ್ಣಯಿಸಲಾಯಿತು.**

ಅದರಂತೆ **ಶ್ರೀ ಕರೆಪ್ಪ ಹಣಮಂತ ತುಬಚಿ ಇವರು ದಂಡನೆಗೊಳಗಾಗಿದ್ದರೂ ಸಹ** ವಾಸ್ತವಿಕ ಮಾಹಿತಿಯನ್ನು ಮಾರೆಮಾಚಿ ಆಯೋಗದ ಅಧಿಸೂಚನೆ ಸಂಖ್ಯೆ:ಇ(2)597/2023-2024/ಪಿಎಸ್‌ಸಿ, ದಿನಾಂಕ:15-03-2024ರಂದು ಅಧಿಸೂಚಿಸಲಾದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆಯಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಉಳಿಕೆ ಮೂಲ ವೃಂದದ) ಹುದ್ದೆಗಳ ನೇಮಕಾತಿಗೆ ಅರ್ಜಿ ಸಲ್ಲಿಸಿ ಸದರಿ ಹುದ್ದೆಗಳಿಗೆ ದಿನಾಂಕ:08-12-2024 ರಂದು ನಡೆಸಲಾದ ಸ್ಪರ್ಧಾತ್ಮಕ ಪರೀಕ್ಷೆಗೆ **(ನೋಂದಣಿ ಸಂಖ್ಯೆ-240604503**) ಹಾಜರಾಗಿರುವುದು ಕಂಡುಬಂದಿದ್ದ ಹಿನ್ನಲೆಯಲ್ಲಿ ಉಲ್ಲೇಖ-(8), (9) ಮತ್ತು (12)ರಂತೆ ಸದರಿಯವರಿಗೆ ದಿನಾಂಕ:30-09-

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment WPP No. 297

2025ರಂದು ಕಾರಣ ಕೇಳುವ ನೋಟೀಸ್ ಮತ್ತು ದಿನಾಂಕ:15-11-2025ರಂದು 2ನೇ ಕಾರಣ ಕೇಳುವ ನೋಟೀಸ್ ಜಾರಿ ಮಾಡಲಾಗಿತ್ತು.

ಉಲ್ಲೇಖ-(10) ಮತ್ತು (13)ರಲ್ಲಿ ಸದರಿಯವರು ನೀಡಲಾದ ಲಿಖಿತ ಸಮಜಾಯಿಷಿಗಳಲ್ಲಿ ತಾನು ಸದರಿ ಪ್ರಕರಣದಲ್ಲಿ ನಿರಾಪರಾಧಿಯಾಗಿದ್ದು, ಹಿಂದಿನ ಪ್ರಕರಣದಲ್ಲಿ ನ್ಯಾಯಾಲಯದ ತೀರ್ಮಾನ ಬಂದ ನಂತರ ಕ್ರಮ ಕೈಕೊಳ್ಳಬಹುದು, ಬಡವ ಮತ್ತು ಪ್ರಾಮಾಣಿಕ ಅಭ್ಯರ್ಥಿಯಾಗಿದ್ದು, ಅರ್ಜಿ ಸಲ್ಲಿಸಲು ಮತ್ತು ಪರೀಕ್ಷೆ ಬರೆಯಲು ಅವಕಾಶ ಮಾಡಿಕೊಡಬೇಕೆಂದು ಕೋರಿದ್ದರು.

ಸದರಿಯವರು ನೀಡಲಾದ ಲಿಖಿತ ಸಮಜಾಯಿಷಿ ತೃಪ್ತಿಕರವಾಗಿಲ್ಲದ ಹಿನ್ನೆಲೆಯಲ್ಲಿ ಈ ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಉಲ್ಲೇಖ-(11)ರ ಆಯೋಗದ ದಿನಾಂಕ:10-12-2025ರ ಆದೇಶದಲ್ಲಿ ಸದರಿ ಪ್ರಕರಣದ ವಿಚಾರಣೆಯನ್ನು ನಡೆಸಿ ವರದಿ ಸಲ್ಲಿಸುವಂತೆ ಶ್ರೀಮತಿ ಬಿ ಅಲುವೇಲಮ್ಮ, ಸಹಾಯಕ ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಶ್ರೀಮತಿ ಎಂ.ಎಸ್ ರಾಜೇಶ್ವರಿ, ಶಾಖಾಧಿಕಾರಿ, ಕರ್ನಾಟಕ ಲೋಕಸೇವಾ ಆಯೋಗ, ಇವರನ್ನು ಮಂಡನಾಧಿಕಾರಿಯನ್ನಾಗಿ ನಿಯೋಜಿಸಲಾಗಿತ್ತು. ಉಲ್ಲೇಖ-(14)ರ ವರದಿಯಲ್ಲಿ ವಿಚಾರಣೆ ನಡೆಸಿದ ವಿಚಾರಣಾಧಿಕಾರಿಗಳು ಸದರಿ ಅಭ್ಯರ್ಥಿಯು ಉದ್ದೇಶ ಪೂರ್ವಕವಾಗಿಯೇ ಸತ್ಯಾಂಶವನ್ನು ಮರೆಮಾಚಿ ನೌಕರಿ ಪಡೆಯುವ ಉದ್ದೇಶದಿಂದ ಅರ್ಜಿ ಸಲ್ಲಿಸಿ ಪರೀಕ್ಷೆ ಬರೆದಿರುವುದಾಗಿ ಅಭಿಪ್ರಾಯ ನೀಡಿರುತ್ತಾರೆ.

ವಿಚಾರಣಾಧಿಕಾರಿಗಳ ವರದಿಗೆ ಸಂಬಂಧಿಸಿದಂತೆ ದಿನಾಂಕ:24-02-2026ರಂದು ನಡೆದ ಆಯೋಗದ ಸಭೆಯಲ್ಲಿ ಶ್ರೀ ಕರೆಪ್ಪ ಹಣಮಂತ ತುಬಚಿ ಇವರನ್ನು ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾದಂತೆ ಶಾಶ್ವತವಾಗಿ ಡಿಬಾರ್ ಮಾಡುವ ದಂಡನೆ ವಿಧಿಸಿ ನಿರ್ಣಯಿಸಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಗಣಿಸಿ ಶ್ರೀ ಕರೆಪ್ಪ ಹಣಮಂತ ತುಬಚಿ ಇವರಿಗೆ ಈ ಕೆಳಕಂಡಂತೆ ಸೂಕ್ತ ಡಂಡನೆ ವಿಧಿಸಿ ಆದೇಶ ಹೊರಡಿಸಿರುತ್ತೇನೆ.

ಆದೇಶ ಸಂಖ್ಯೆ: ಪಿಎಸ್ ಸಿ ಇ(2) 15 ದಿನಾಂಕ:18-05-2026.

ಮೇಲ್ಕಂಡ ಪ್ರಕರಣವನ್ನು ಆಯೋಗವು ಬಹಳ ಗಂಭೀರವಾಗಿ ಪರಿಗಣಿಸಿ, ಕರ್ನಾಟಕ ನಾಗರೀಕ ಸೇವಾ ನಿಯಮಗಳು (ಸಾಮಾನ್ಯ ನೇಮಕಾತಿ)-1977ರ ನಿಯಮ 20ರನ್ವಯ ಹಾಗೂ ಆಯೋಗದ ದಿನಾಂಕ:14-07-1993ರ ಅಧಿಕೃತ ಜ್ಞಾಪನ ಮತ್ತು ಇದಕ್ಕೆ ಸೇರ್ಪಡೆಗೊಳಿಸಿದ ದಿನಾಂಕ:27-11-2020ರ ಅಧಿಕೃತ ಜ್ಞಾಪನಗಳನ್ವಯ ಪ್ರದತ್ತವಾದ ಅಧಿಕಾರದ ಮೇರೆಗೆ **" 2024ನೇ ಸಾಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಉಳಿಕೆ ಮೂಲ ವೃಂದದ ಹುದ್ದೆಗಳ ನೇಮಕಾತಿಗೆ ಅಭ್ಯರ್ಥಿಯಾದ ಶ್ರೀ ಕರೆಪ್ಪ ಹಣಮಂತ ತುಬಚಿ ನೋಂದಣಿ ಸಂಖ್ಯೆ:240604503 ಇವರನ್ನು ಆಯೋಗವು ನಡೆಸುವ ಯಾವುದೇ ಪರೀಕ್ಷೆಗೆ ಹಾಜರಾಗದಂತೆ ಶಾಶ್ವತವಾಗಿ ಡಿಬಾರ್ ಮಾಡಿ ಆದೇಶಿಸಲಾಗಿದೆ"**

ಆಯೋಗದ ಆದೇಶದ ಮೇರೆಗೆ

ಸಹಿ/-

(ಜ್ಯೋತಿ .ಕೆ)

ಕಾರ್ಯದರ್ಶಿ

ಕರ್ನಾಟಕ ಲೋಕಸೇವಾ ಆಯೋಗ

PR-493

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-೫೬೯.

THAMMAIAH